# ಚೆನ್ನಣ್ಣ ವಾಲೀಕಾರ ಅವರ ಕಥೆಗಳಲ್ಲಿ ಪ್ರತಿರೋಧದ ನೆಲೆ

**ರಾಘವೇಂದ್ರ ಬಿ. ಎ. ದ್ರಾಕ್ಷಿ[1] & ವಿಜಯಕುಮಾರ ಹೆಚ್. ವಿಶ್ವಮಾನವ[2]**

[1]ಸಂಶೋಧನ ವಿದ್ಯಾರ್ಥಿ, ಕನ್ನಡ ವಿಭಾಗ, ಮಾನವಿಕ ಮತ್ತು ಭಾಷಾನಿಕಾಯ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರ್ಗಿ.

[2]ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಾನವಿಕ ಮತ್ತು ಭಾಷಾನಿಕಾಯ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರ್ಗಿ.

**Received: 09-04-2024 ; Acepted: 10-05-2024 ; Published: 08-06-2024**

**DOI: https://doi.org/10.5281/zenodo.11525890**

## ABSTRACT:

ಕಥೆ ಹೇಳುವುದು ಮತ್ತು ಕೇಳುವುದು ಮನುಷ್ಯನ ಆಸಕ್ತಿ ಮತ್ತು ಹವ್ಯಾಸಿ ಎರಡು ಹೌದು. ಕೆಲವು ವರ್ಷಗಳ ಹಿಂದೆ ದೂರದರ್ಶದನಂತಹ ಮಾಧ್ಯಮಗಳು ಬರುವುದಕ್ಕೆ ಮುಂಚೆ ಭಾರತದಂತಹ, ಕರ್ನಾಟಕದಂತಹ ಹಳ್ಳಿಗಳಲ್ಲಿ ಹಿರಿಯರು ಹೇಳುವ ಕತೆಗಳೇ ಮನರಂಜನೆಯ ತಾಣಗಳು ಆಗಿದ್ದವು. ನನಗೆ ನೆನಪಿರುವ ಹಾಗೆ ಚಿಕ್ಕವನಿರುವಾಗ ನಮ್ಮ ಅಜ್ಜಿಯೂ ಹಲವೂ ಕಥೆಗಳನ್ನು ಹೇಳಿ ಕಥೆ ಎಂದರೆ ಏನು ಎಂಬುದನ್ನು ಪರಿಚಯಿಸಿದ್ದಳು. ಅಷ್ಟೇ ಅಲ್ಲದೆ ಅವರು ಹೇಳುವ ಕಥೆಗಳಲ್ಲಿ ಜೀವನದ ಬದುಕಿನ ಅನುಭವದ ಸತ್ಯಾಸತ್ಯಗಳನ್ನು ಒಳಗೊಂಡಿರುವಂತಹ ಮೌಲ್ಯಯುತವಾದ, ನೀತಿಯುತವಾದ ಸಂದೇಶಗಳನ್ನು ಸಾರುವ ಕಥೆಗಳಾಗಿದ್ದವು. ಇಂತಹ ಕಥೆಗಳನ್ನು ಹಿರಿಯರಿಂದ ಕೇಳಿ ಆಧುನಿಕ ಕಥಾ ಸಾಹಿತ್ಯದಲ್ಲಿ ಹಲವಾರು ಕಥೆಗಳನ್ನು ಬರೆದ ಕಥೆಗಾರರು ಕನ್ನಡ ಸಾಹಿತ್ಯದಲ್ಲಿ ಕಂಡು ಬರುತ್ತಾರೆ. ಅವರಲ್ಲಿ ಚೆನ್ನಣ್ಣ ವಾಲೀಕಾರರು ಒಬ್ಬರೂ. ಈ ಕಥಾ ಸಾಹಿತ್ಯವೂ ತನ್ನದೇಯಾದ ಪರಂಪರೆ ಹೊಂದಿದ್ದು ಪ್ರಾಚೀನ ಸಾಹಿತ್ಯದಿಂದ ದಲಿತ ಬಂಡಾಯ ಸಾಹಿತ್ಯದವರೆಗೆ ಬೆಳೆಯುತ್ತ ಬಂದಿದೆ. ದಲಿತ-ಬಂಡಾಯ ಸಾಹಿತ್ಯದ ಪ್ರಸಿದ್ದ ಸಾಹಿತಿಗಳು, ಚಿಂತಕರು, ಹೋರಾಟಗಾರರು ಆದ ಚೆನ್ನಣ್ಣ ವಾಲೀಕಾರರು ಕಥಾ ಸಾಹಿತ್ಯದಲ್ಲಿಯೂ ತಮ್ಮ ಅನುಭವಕ್ಕೆ ಬಂದ, ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ನಡೆದ ಶೋಷಣೆ, ದಬ್ಬಾಳಿಕೆ, ದೌರ್ಜನ್ಯ, ಅಸಮಾನತೆ, ಅತ್ಯಾಚಾರ, ಅನೈತಿಕ ಸಂಬಂಧ ಮೊದಲಾದ ಘಟನೆಗಳನ್ನು ಕಥಾ ಸಾಹಿತ್ಯದಲ್ಲಿ ಹಿಡಿದಿಟ್ಟಿದ್ದಾರೆ. ಅವರ ಕಥೆಗಳನ್ನು ಒಳಗೊಂಡ “ಚೆನ್ನಣ್ಣ ವಾಲೀಕಾರ ಕಥೆಗಳಲ್ಲಿ ಪ್ರತಿರೋಧದ ನೆಲೆ” ಎಂಬ ಲೇಖನದಲ್ಲಿ ಆಯ್ದ ಕಥೆಗಳನ್ನು ಪ್ರತಿರೋಧದ ಹಿನ್ನಲೆಯಲ್ಲಿ ವಿಮರ್ಶೆಗೆ ಒಳಪಡಿಸಿರುವುದು ಒಂದು ಸಣ್ಣ ಪ್ರಯತ್ನವಾಗಿದೆ.

**KEYWORDS:**

ಮಾನವ, ಸಂಘ ಜೀವಿ, ರಾಷ್ಟ್ರದ ಏಳಿಗೆ, ಬಂಡಾಯ, ಸಣ್ಣ ಕಥೆ.

“ಚೆನ್ನಣ್ಣ ವಾಲೀಕಾರರು ಬಂಡಾಯ ಸಾಹಿತ್ಯದ ಬೆನ್ನೆಲುಬಾಗಿದ್ದರು”

ಬಿ. ಟಿ. ಲಲಿತಾನಾಯಕ

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಥಾ ಸಾಹಿತ್ಯವು ಕೂಡ ಒಂದು. ಸಮಾಜದ ಅನೇಕ ಮಜಲುಗಳನ್ನು ಕಥೆಗಾರರು ತಮ್ಮ ಕಥೆಗಳಲ್ಲಿ ದಾಖಲಿಸಿದ್ದಾರೆ. ಕನ್ನಡ ಕಥಾ ಪರಂಪರೆಯನ್ನು ಅವಲೋಕಿಸಿದಾಗ ನಮಗೆ ಮೊದಲು ಕತೆಯ ಸುಳಿವು ಸಿಗುವುದು ೯ ನೇ ಶತಮಾನದ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ, ಚಾವುಂಡರಾಯನ ಚಾವುಂಡರಾಯ ಪುರಾಣ, ದುರ್ಗಸಿಂಹನ ಪಂಚತಂತ್ರ ಕಥೆಗಳಲ್ಲಿ. ಮುಂದೆ ತನ್ನ ಹರವು ಪಡೆದುಕೊಳ್ಳುತ್ತ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯದಲ್ಲಿ ತನ್ನದೆಯಾದ ಛಾಪುಮೂಡಿಸಿದೆ. ಪಂಜೆಮಂಗೇಶರಾಯ, ಕೆರೂರು ವಾಸದೇವಚಾರ್ಯ, ಮಾಸ್ತಿ, ಕುವೆಂಪು, ಆನಂದಕಂದ, ಆನಂದ, ಚದುರಂಗ, ರಾಘವೇಂದ್ರ ಖಾಸನೀಸ, ತೇಜಸ್ವಿ , ಚಿತ್ತಾಲ, ನಿರಂಜನ, ಕೊಡಗಿನ ಗೌರಮ್ಮ , ವೀಣಾ ಶಾಂತೇಶ್ವರ, ಗೀತಾನಾಗಭೂಷಣ, ವೈದೇಹಿ, ಬೇಸಗರಹಳ್ಳಿ ರಾಮಣ್ಣ , ಶಾಂತರಸ, ಚೆನ್ನಣ್ಣ ವಾಲೀಕಾರ, ಅಮರೇಶ ನುಗುಡೋಣಿ, ಎಚ್. ಟಿ. ಪೋತೆ, ಕಲಿಗಣನಾಥ ಗುಡದೂರ, ಸಿದ್ರಾಮ್ ಹೊನಕಲ್, ರಾಜಶೇಖರ ನೀರಮಾನ್ವಿ , ಚಿದಾನಂದ ಸಾಲಿ, ರಾಜಶೇಖರ ಹತಗುಂದಿ ಮೊದಲಾದ ಕಥೆಗಾರರು ಕಂಡುಬರುತ್ತಾರೆ.

ಮಾನವನು ಸಂಘ ಜೀವಿ, ಕಥೆ ಹೇಳುವುದು ಮತ್ತು ಕೇಳುವುದು ಅವನ ಆಸಕ್ತಿಯ ಧಾರೆ. ನಾವೆಲ್ಲರೂ ಸಣ್ಣವರಿದ್ದಾಗ ಅಜ್ಜಿ ತಾತಂದಿರು ಹೇಳಿದ ಮೌಲಿಕ ಕಥೆಗಳನ್ನು ಕೇಳಿ ಬೆಳೆದವರು. ಅವು ಹೆಚ್ಚಾಗಿ ಜನಸಾಮಾನ್ಯರಿಗೆ ಸಂಬಂಧಿಸಿದ ಕಥೆಗಳಾಗಿದ್ದವು. ಕಥೆ ಎಂಬುದು ಒಂದರಿಂದ ಎರಡು ಗಂಟೆಯೊಳಗೆ ಓದಿ ಮುಗಿಸಬಹುದಾದದ, ವಾಸ್ತವದ ಚಿತ್ರಣವನ್ನು ಕಂಡುಕೊಳ್ಳುವ ಒಂದು ಪ್ರಕ್ರಿಯೆ. ಕುತೂಹಲಕಾರಿ ಪ್ರಾರಂಭ ಮತ್ತು ಪರಿಣಾಮಕಾರಿ ಅಂತ್ಯ ಕಥೆಯ ಲಕ್ಷಣವಾಗಿದೆ. “ಕಣ್ಣಾ ಮುಚ್ಚೆ

ಕಾಡೇಗೂಡೇ, ಉದ್ದಿನ ಮೂಟೇ ಉರುಳೇ ಹೋಯಿತು, ನಮ್ಮಯ್ಯ ಹಕ್ಕಿ ಬಿಟ್ಟೇ ಬಿಟ್ಟೇ, ನಿಮ್ಮಯ ಹಕ್ಕಿ ಬಚ್ಚಿಟ್ಟಕೋ" ನಮ್ಮೆಲ್ಲರ ಅಜ್ಜಿ ತಾತಂದಿರು ಕಥೆ ಹೇಳುವಾಗ ಹೇಳುವ ಹಾಡಿದು. ಇದರ ಅರ್ಥವಿಷ್ಟೇ ಕಣ್ಣುಮುಚ್ಚೆ ಅಂದರೆ ಸತ್ತು ಹೋಗಿದ್ದಿನಿ, ಕಾಡೇ ಗೂಡು ಅಂದರೆ ಸ್ಮಶಾನವೇ ನನ್ನ ಮನೆ, ಉದ್ದಿನ ಮೂಟೇ ಉರುಳಿಹೋಯಿತು ಅಂದರೆ ಮಾಡಿದ ಸಂಪತ್ತು ಬೇರೆಯವರ ಪಾಲಾಯಿತು, ನನ್ನಯ್ಯ ಹಕ್ಕಿ ಬಿಟ್ಟೇ ಬಿಟ್ಟೇ ಅಂದರೆ ಪ್ರಾಣ ಬಿಟ್ಟಿದ್ದೇನೆ, ನಿಮ್ಮಯ್ಯ ಹಕ್ಕಿ ಬಚ್ಚಿಟ್ಟುಕೋ ಅಂದರೆ ನಿಮ್ಮ ಪ್ರಾಣ ಕಾಪಾಡಿಕೊಳ್ಳಿ ಎಂದರ್ಥವಾಗುತ್ತದೆ. ನನ್ನ ಪ್ರಕಾರ "ಕಥೆ ಎಂದರೆ ಪಾತ್ರಗಳು, ಘಟನೆಗಳು, ಸನ್ನಿವೇಶಗಳು ಮೊದಲಾದವು ಮೌಲಿಕ ಅಂತರ್‌ಸತ್ಯವನ್ನು ಒಳಗೊಳ್ಳುವ ಮೂಲಕ ಒಂದು ವಾಸ್ತವ ಪ್ರಪಂಚವನ್ನು ಅನಾವರಣ ಮಾಡುವ ಪ್ರಕ್ರಿಯೆಯಾಗಿದೆ".

ಸಾಹಿತ್ಯ ಓದುತ್ತ ಕಥೆಯಲ್ಲಿರುವ ವಿಭಿನ್ನ ಕಥಾನಕಗಳನ್ನು ಗಮನಿಸಿದ್ದೇವೆ. ಹಾಗೆಯೇ ಹೈದ್ರಾಬಾದ ಕರ್ನಾಟಕ ಇಂದಿನ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿಯೂ ಕೂಡ ಅನೇಕ ಕಥೆಗಾರರು ಕಾಣಸಿಗುತ್ತಾರೆ. ಅವರಲ್ಲಿ ದಲಿತ ಬಂಡಾಯ ಸಾಹಿತ್ಯ ಘಟ್ಟದ ಸಂಘಟನಕಾರರು, ಚಳುವಳಿಗಾರರು ಆದ ಚೆನ್ನಣ್ಣ ವಾಲೀಕಾರರು ಕಲ್ಯಾಣ ಕರ್ನಾಟಕದ ಪ್ರಥಮ ಬಂಡಾಯದ ಧ್ವನಿ, ಕೆಂಪಂಗಿ ಚೆನ್ನಣ್ಣ ಎಂದೆ ಹೆಸರಾದ ಇವರು ಕತೆಗಾರರು, ಕಾದಂರಿಕಾರರು. ಗುಲಬರ್ಗಾ ಜಿಲ್ಲೆಯ ಚಿತ್ತಾಪೂರು ತಾಲೂಕಿನ ಶಂಕರವಾಡಿಯ ಧೂಳಪ್ಪ ಮತ್ತು ಸಾಬಮ್ಮರ ಮಗನಾಗಿ 1943 ಎಪ್ರೀಲ್ 6 ರಂದು ಕುಸ್ತಿ, ಹಾಡುಗಾರಿಕೆ, ಬಯಲಾಟದ ಒಕ್ಕಲು ಮನೆತನದಲ್ಲಿ ಜನಿಸಿದರು. ತಮ್ಮ ಪ್ರದೇಶದ ಸುತ್ತ ನಡೆಯುವ ಶೋಷಣೆ, ಅತ್ಯಾಚಾರ, ಅಸ್ಪೃಶ್ಯತೆಯ ಆಚರಣೆ, ಮೊದಲಾದ ಜಟಿಲ ಸಮಸ್ಯೆಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಇವರ ಸಮಗ್ರ ಕಥಾ ಸಂಪುಟದ 'ಕಪ್ಪು ಕಥೆಗಳು' ಮತ್ತು 'ಕುತ್ತದಲ್ಲಿ ಕುದ್ದವರು ಕಥೆಗಳು' ಎಂಬ ಸಂಕಲನಗಳಲ್ಲಿನ 'ಅಡಿಜಾತಿ', 'ಶುಂಭ ನಿಶುಂಭರು' ಮತ್ತು 'ಜಕ್ಕವ್ವ' ಎಂಬ ಕಥೆಗಳನ್ನು ಇಲ್ಲಿ ಆಯ್ಕೆಮಾಡಿಕೊಳ್ಳಲಾಗಿದೆ. ಅಡಿಜಾತಿ ಕಥೆಯಲ್ಲಿ ಜಯರಾಮನ ಮಾತನ್ನು ಲಂಬಾಣಿ ಸಮುದಾಯದ ಜನರು ತಪ್ಪದೇ ಪಾಲಿಸುತ್ತಿದ್ದರು. ಆತನ ಕೊನೆಯ ಮಗ ಮಾಡಿದ ತಪ್ಪಿನಿಂದ ತಮ್ಮ ಊರಿಂದ ಮತ್ತೊಂದು ಊರಿಗೆ ಬಂದು ಬದುಕುತ್ತಿರುವಾಗ, ಮತ್ತೆ ಅದೇ ಊರಿಗೆ ಹೊಗುವ ಪ್ರಸಂಗವನ್ನು ವ್ಯಕ್ತಪಡಿಸಿದಾಗ ಜಯರಾಮನನ್ನು ಆತನ ಸಮುದಾಯದ ಜನರು ಮತ್ತು

ಸ್ವಂತ ಮಕ್ಕಳು ಪ್ರತಿರೋಧಿಸುತ್ತಾರೆ. ಶುಂಭ ನಿಶುಂಭರು ಮತ್ತು ಜಕ್ಕವ್ವ ಕಥೆಯಲ್ಲಿ ಮೇಲ್ವರ್ಗದವರಾದ ಶುಂಭ ನಿಶುಂಭರು ಎಂದೆ ಹೆಸರಾದ ಸಾಹುಕಾರ ಸಿದ್ದಪ್ಪ ಮತ್ತು ಶೇಖರಪ್ಪರ ಶೋಷಣೆಗೆ ತಮ್ಮವರೆಲ್ಲರನ್ನು ಕಳೆದುಕೊಂಡು ಅವರ ಎದುರು ಜಕ್ಕವ್ವ ತೋರುವ ಪ್ರತಿರೋಧವನ್ನು ವಿಶ್ಲೇಷಣೆಗೆ ಒಳಪಡಿಸುವುದು ಇಲ್ಲಿನ ಆಶಯವಾಗಿದೆ.

ಶುಂಭಾ ನಿಶುಂಭರು ಪೌರಾಣಿಕ ಕತೆಗಳಲ್ಲಿ ಬರುವ ರಾಕ್ಷಸ ಸಹೋದರರು. ಇವರು ತಮ್ಮ ತಪಸ್ಸಿನ ಮೂಲಕ ಬ್ರಹ್ಮನಿಗೆ ಒಂದು ಹೆಣ್ಣನ್ನು ಹೊರತು ಪಡಿಸಿ ಉಳಿದ ಯಾರಿಂದಲು ನಮಗೆ ಸಾವು ಬರಬಾರದೆಂದು ವರ ಪಡೆದುಕೊಂಡವರು. ತಮ್ಮಲ್ಲಿರುವ ರಾಕ್ಷಸ ಪ್ರವೃತ್ತಿಯಿಂದ ಇಷ್ಟಬಂದಂತೆ ರಾಜರಿಂದ ಹಿಡಿದು ಜನಸಾಮಾನ್ಯರಿಗೂ ತೊಂದರೆ ಕೊಡುತ್ತಿದ್ದವರು. ಇವರ ದೌರ್ಜನ್ಯವನ್ನು ತಡೆಯಲು ಪಾರ್ವತಿಯು ವಿವಿಧ ರೂಪಗಳನ್ನು ತಾಳಿ ಶುಂಭ ನಿಶುಂಭರನ್ನು ಸದೆಬಡೆದ ಕಥೆಯನ್ನು ಕೇಳಿದ್ದೇವೆ. ಇಂತಹ ಕತೆಯನ್ನೇ ಹೋಲುವಂತ ವಾಲೀಕಾರರ ಕಥೆ "ಶುಂಭ ನಿಶುಂಭರು ಮತ್ತು ಜಕ್ಕವ್ವ" 'ನೀ ಹೊದ ಮರುದಿನ ನಮ್ಮ ಬದುಕು ಮೊದಲಿನಂಗ ಆಗ್ಯಾದೋ ಬಾಬಾಸಾಹೇಬ್' ಎಂಬುದು ಇವರ ಜನಪ್ರಿಯ ಕವಿತೆಯ ಸಾಲು. 1966 ರಲ್ಲಿ ದಲಿತರ ಕಷ್ಟ ನಿವಾರಣೆಗಾಗಿ ತಮ್ಮ ಮೊದಲ ಹೋರಾಟ ಪ್ರಾರಂಭಿಸಿದರು. 70 ರ ದಶಕದ ಆರಂಭದಲ್ಲಿ ನಾಡಿನ್ಯಾದಂತ ಸಂಚರಿಸಿ ಬಂಡಾಯದ ಜಾಗೃತಿ ಮೂಡಿಸಿ 1979 ರಲ್ಲಿ ಧರ್ಮಸ್ಥಳದಲ್ಲಿ ಆಯೋಜಿಸಿದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಗೋಷ್ಠಿ, ಏರ್ಪಡಿಸುವಂತೆ ಆಗೀನ ರಾಜ್ಯಾಧ್ಯಕ್ಷರಾದ ಹಂಪಾ ನಾಗರಾಜಯ್ಯನವರನ್ನು ಒತ್ತಾಯಿಸಿದರು. ಉದ್ದೇಶ ಈಡೇರದೇ ಇದ್ದಾಗ ತನ್ನ ಬೆಂಬಲಿತ ಹೋರಾಟಗಾರರೊಂದಿಗೆ ಸಮ್ಮೇಳನ ನಡೆಯುವ ದಿನವೇ ದಲಿತ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ನಡೆಸುವ ಮೂಲಕ ನಾಡಿನ ಗಮನ ಸೆಳೆದರು. ಕಲಬುರ್ಗಿಯ ಚೂಂಚೂರು ಮಹಾಪುರ ತಾಯಿ, ರಾಯಚೂರಿನ ಅರೋಲಿ ಹಾಗೂ ಮೇದಿನಿಹಾಳ, ಶಿವಮೊಗ್ಗದ ಚಂದ್ರಗುತ್ತಿ, ಕೊಪ್ಪಳದ ಕುದುರೆಮೋತಿ ಸೇರಿದಂತೆ ಹಲವು ಕಡೆ ಬೆತ್ತಲೆಸೇವೆಯಂತಹ ಮತ್ತು ಭೂಹೋರಾಟದ ಚಳುವಳಿಗಳಲ್ಲಿ ಭಾಗವಹಿಸಿ, ಸಮಗ್ರ ಕ್ರಾಂತಿಗಾಗಿ ಸಾಮಾಜಿಕ ಬದಲಾವಣೆ, ಜಗದ ಬದಲಾವಣೆಗಾಗಿ ಮಹಿಳೆಯರ ವಿಮೋಚನೆ, ರಾಷ್ಟ್ರದ ಏಳಿಗೆಗಾಗಿ ಜಾತಿ ಮತ್ತು ಬಡತನದ ಸರ್ವನಾಶಕ್ಕಾಗಿ ಹೋರಾಟ ಮಾಡಿದ್ದಾರೆ.

ಇವರ ಕಥೆಗಳಲ್ಲಿ ಪ್ರತಿರೋಧ ಪ್ರಮುಖ ವಸ್ತುವಾಗಿದೆ. ಪ್ರತಿರೋಧ ಎಂದರೆ ಅಡ್ಡಿ, ಪ್ರತಿಭಟನೆ, ವಿರೋಧ ಎಂಬ ಅರ್ಥಗಳು ಶಬ್ದಕೋಶದಲ್ಲಿ ಸಿಗುತ್ತವೆ. ಯಾವುದೇ ಒಂದು ವಿಷಯ ಅಥವಾ ವ್ಯವಸ್ಥೆಯ ವಿರುದ್ಧ ಅಸಮ್ಮತಿ ಸೂಚಿಸಿ ಅದನ್ನು ವಿರೋಧಿಸುವ ಒಂದು ಕ್ರಿಯೆಯೇ ಪ್ರತಿರೋಧವಾಗಿದೆ. ವರ್ಣಾಶ್ರಮವನ್ನು ಒಪ್ಪದೆ ಇರುವುದರಲ್ಲಿ, ಪ್ರಭುತ್ವದ ಹಿಡಿತವನ್ನು ಪ್ರಶ್ನಿಸುವಲ್ಲಿ, ಧಾರ್ಮಿಕ ಅಹಂಕಾರವನ್ನು ನಿರಾಕರಿಸುವಲ್ಲಿ, ನಾಲ್ಕು ಗೋಡೆಯ ಮಧ್ಯ ಬದುಕುತಿದ್ದ ಹೆಣ್ಣು ಆ ಪರಿಸರದಿಂದ ಹೊರಬಂದು ಅಕ್ಷರ ಕಲಿತು ಶೋಷಣೆಗೆ ಕಾರಣವಾದ ವ್ಯವಸ್ಥೆಯನ್ನು ಧಿಕ್ಕರಿಸುವ ಶಕ್ತಿಯನ್ನು ಪಡೆದುಕೊಂಡಿದ್ದು ಪ್ರತಿಭಟನೆಯ ಮೂಲಕ.

ಚೆನ್ನಣ್ಣನವರ 'ಕಪ್ಪು ಕಥೆಗಳು' ಸಂಕಲನದಲ್ಲಿ ಒಂದಾದ 'ಅಡಿಜಾತಿ' ಕಥೆಯು ಏಳು ಅಧ್ಯಾಯಗಳನ್ನು ಒಳಗೊಂಡಿದ್ದು ಲಂಬಾಣಿ ಸಮುದಾಯದ ಜನರ ಬದುಕನ್ನು ತೆರೆದಿಡುತ್ತದೆ. ಸುಮಾರು ಐವತ್ತು ಗುಡಿಸಲುಗಳಿಂದ ಕೂಡಿದ ತಾಂಡಾ ಸರಡಗಿ ಗ್ರಾಮದ ಎಡಭಾಗದಲ್ಲಿದೆ. ಈ ಕಥೆಯ ಕೇಂದ್ರಪಾತ್ರ ಜಯ್ರ್ಯಾಮ, ಜಯ್ರ್ಯಾಮನ ಮಕ್ಕಳು ನಾಮ್ಯಾ, ಖೇಮ್ಯಾ, ರೇವ್ಯಾ ಮತ್ತು ಗೋಪ್ಯಾ. ಕಿಡಿಗೇಡಿಯಾದ ಗೋಪ್ಯಾ ಮಾಡಿದ ಒಂದು ತಪ್ಪಿನಿಂದಾಗಿ ಜಯ್ರ್ಯಾಮನ ಬದುಕೆ ನಿರ್ನಾಮವಾಗುವ ಒಂದು ಪರಿಸರವನ್ನು ಈ ಕಥೆ ಓದುಗರ ಮುಂದಿಡುತ್ತದೆ. ಈ ಕಥೆಯಲ್ಲಿ ಬರುವ ಪೂರ್ಯಾ, ತೋಳ್ಯಾ, ಬೀಖ್ಯಾ ರೂಪ್ಲಿ, ಹಾವು, ಟಗರು, ಕೋಣ, ಸಾವುಕಾರ ನಾಗಪ್ಪ, ಹೋಟೆಲ ಮಲ್ಲಪ್ಪ, ತೋಳ್ಯಾನ ಮಗ ದೀಪ್ಯಾ, ಕುಲಕರ್ಣಿ ರಾಮ್ರಾಯ, ಮಾಲೀಗೌಡ ಭೀಮರಾಯ, ಹುಸೇನಿ, ಸರಳಾ, ಜಯ್ರ್ಯಾಮನ ಮೊಮ್ಮಗ ಕೇಶ್ಯಾ, ಗಾಣಿಗೇರಾ ಅಯ್ಯಪ್ಪನ ಮಗಳು ನಿಂಗಮ್ಮ, ಚೂಣ್ಯಾ, ಚೂಣ್ಯಾನ ಹೆಂಡತಿ ಸೋನಿ, ಸೋಮ್ರಾಯಗೌಡ ಈ ಪಾತ್ರಗಳು ಪ್ರತಿಭಟನೆ, ಕಾಮ, ಮೋಸ, ಜಾತಿ ತಾರತಮ್ಯ, ಶೋಷಣೆ, ಪ್ರಭುತ್ವ, ಕೋಲೆ ಮೊದಲಾದವು ಸಂದರ್ಭಕ್ಕೆ ತಕ್ಕಂತೆ ತಂದ ಕಥಾರಚನೆಯ ಕ್ರಮ ಇಲ್ಲಿದೆ.

ತಾಂಡಾದ ನಾಯಕ ಜಯ್ರ್ಯಾಮ ಆಗಿದ್ದರಿಂದ ಈ ತಾಂಡಕ್ಕೆ ಜಯ್ರ್ಯಾಮ ನಾಯಕ ತಾಂಡ ಎಂದು ಕರೆಯುತ್ತಾರೆ. ಜಯ್ರ್ಯಾಮ ಸಣ್ಣವನಿದ್ದಾಗ ತಂದೆ ಸರಡಿಗೆಯಲ್ಲಿ ಮೂರು-ನಾಲ್ಕು ಮನೆಗಳನ್ನು ಕಟ್ಟಿಸಿ ಒಂದು ಕಿರಾಣಿ ಅಂಗಡಿ ಇಟ್ಟಿದ್ದನು. ಇದನ್ನು ಕಂಡ ಮೇಲ್ಜಾತಿ ಜನರು "ಈ ಅಡಿಜಾತಿ ಬಂದೀ ಉರಾಗ್ ದುಕಾನ್ನಿಡೋದಾ?"[1] ಎಂದು ಹಲ್ಲುಗಳನ್ನು

ಮಸೆದಿದ್ದರು. ತಂದೆ ಸತ್ತ ನಂತರ ಜಯ್ರಾಮ ಆಗಾಗ ಸರಡಿಗೆ ಹೋಗಿ ಬರುವದು ಮಾಡುತ್ತಿದ್ದನು. ಈ ತಾಂಡದ ಮಂದಿ ಜಯ್ರಾಮ ಹೇಳಿದಂತೆ, ಅವನ ಮಾತಿನಂತೆ ನಡೆಯುತ್ತಿದ್ದರು. ಆದರೆ ಅವನ ನಾಲ್ಕು ಗಂಡು ಮಕ್ಕಳಲ್ಲಿ ಕೊನೆಯವನಾದ ಗೋಪ್ಯಾ ಮಾತ್ರ ತಂದೆಯ ವಿರೋಧಿಯಾಗಿದ್ದನು. ತಾಂಡಾದ ಪೂರ್ವದಿಕ್ಕಿಗೆ ಪೋಲಿಸ್ ಗೌಡರ ಸೀಮೆ ಹೊಲ. ಆ ಹೊಲದಲ್ಲಿ ಒಂದು ಬೃಹದ್ದಾಕಾರದ ಹುಣಸೆಮರ. ಆ ಮರದ ಕೆಳಗೆ ಮನುಷ್ಯನೆತ್ತರದಷ್ಟು ಒಂದು ಹುತ್ತ ಬೆಳೆದಿದೆ. ಆ ಹುತ್ತಿನೊಳಗೆ ಏಳು ರಂಜಣಿಗೆಯ ದ್ರವ್ಯವಿದ್ದು ಅದನ್ನು ಕಾಯಲು ಏಳು ಹೆಡೆಯ ಸರ್ಪವಿದೆ. ಅದರ ಜೊತೆಗೆ ಒಂದು ಟಗರು, ಒಂದು ಕೋಣ ಇವೆ. ಹೇಗಾದರು ಮಾಡಿ ಆ ಹುತ್ತದಲ್ಲಿರುವ ರಂಜಣಿಗೆಯ ದ್ರವ್ಯವನ್ನು ಕಬಳಿಸಲು ಹೊಂಚು ಹಾಕಿರುತ್ತಾನೆ. ತಂದೆಯ ಕಣ್ಣು ತಪ್ಪಿಸಿ ಆ ಕೆಲಸ ಮಾಡಲು ಅಸಾಧ್ಯವಾಗಿರುತ್ತದೆ.

ತಂದೆ ದೇವಣಿಗೆ ಎಂಬ ಊರಿಗೆ ಹೋದ ಸಮಯ ನೊಡಿಕೊಂಡು ಗೋಪ್ಯಾ ತನ್ನ ಗೆಳೆಯರೊಂದಿಗೆ ಹಾರಿ, ಸಲಿಕೆ, ಗುದ್ದಲಿಗಳನ್ನು ತೆಗೆದುಕೊಂಡು ಹುತ್ತವಿರುವ ಸ್ಥಳಕ್ಕೆ ಬರುತ್ತಾರೆ. ಹುತ್ತವನ್ನು ತೊಡಲು ಆರಂಭಿಸಿದಾಗ ಒಳಗಿದ್ದ ಹಾವು, ಟಗರು, ಕೋಣಗಳು ಬಂದವು. ಹಾವು ಬುಸುಗುಟ್ಟುತ್ತ ಕಚ್ಚಿದರೆ, ಟಗರು ಗುದ್ದತೊಡಗಿತು, ಕೋಣ ಇರಿಯತೊಡಗಿತು. ಇಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ಹಾವು ಹುತ್ತದೊಳಗೆ ವಾಸಿಸುವ ಸರಿಸೃಪವಾಗಿರುವುದರಿಂದ ಅದು ಬರುವುದು ನಿಜವೆನ್ನಬಹುದು. ಆದರೆ ಟಗರು ಮತ್ತು ಕೋಣಗಳು ಒಳಗಿಂದ ಬಂದವು ಎಂಬುದು ನಾನು ಕಥೆ ಓದಿದಾಗ ಬಹುಶಃ ನನ್ನನ್ನು ಕಾಡಿದ ಪ್ರಶ್ನೆ. ಅವು ಹುಣಸೆ ಮರದ ಅಕ್ಕಪಕ್ಕದಲ್ಲಿ ಯಾವಾಗಲು ಹುತ್ತನ್ನು ಕಾವಲು ಕಾಯುತ್ತಿದ್ದವೇ? ಅಥವಾ ಆ ದಿನ ಅಲ್ಲಿಗೆ ಬಂದಿದ್ದವೇ? ಎಂಬುದು ತಿಳಿಯದು. ವಾಲೀಕಾರರು ಹೇಳಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಗೋಪ್ಯಾ ಮತ್ತು ಅವನ ಗಳೆಯರು ಅಲ್ಲಿಂದ ಬರತೊಡಗಿದರು. ಅಷ್ಟಕ್ಕೆ ಸುಮ್ಮನಿರದ ಹಾವು ಬೆನ್ನು ಹತ್ತಿತು, ಹುತ್ತವನ್ನು ನಾಶಮಾಡಲು ಬಂದ ಅವರು ತಮ್ಮ ಗುಡಿಸಲುಗಳನ್ನು ಹೊಕ್ಕರು. ಸೇಡು ತಿರಿಸಿಕೊಳ್ಳಲು ಬಂದ ಹಾವು ಗೋಪ್ಯಾನ ಸಹಿತ ಅವನ ಹೆಂಡತಿ ಮಕ್ಕಳನ್ನು ಕಚ್ಚಿ ಸಾಯಿಸಿತು. ಬೆಳಗಾಗುವುದರೊಳಗಾಗಿ ತಾಂಡಾದ ಹತ್ತಿಪ್ಪತ್ತು ಜನಗಳು ಸತ್ತ ಸುದ್ದಿ ತಾಂಡಾದ ತುಂಬಾ ಹಬ್ಬಿತು. ದೇವಣಿಗೆಯಿಂದ ಬಂದ ಜಯ್ರಾಮ ಸುದ್ದಿ ತಿಳಿದು ಎದೆ ಹೊಡೆದುಕೊಂಡ.

ತನ್ನ ಮಗ ಹುತ್ತಿಗೆ ಕೈ ಹಾಕಿದ್ದರಿಂದ ಹೀಗಾಯಿತೆಂದು ತಾಯಿ ರೂಪ್ಲಿ ತಮ್ಮ ಮನೆಯೊಳಗಿರುವ ಹುತ್ತಿನ ವ್ರತ ಕೈಗೊಂಡಳಾದರು ಏನು ಪ್ರಯೋಜನವಾಗಲಿಲ್ಲ. ಪ್ರತಿದಿನ ಒಬ್ಬೊಬ್ಬರನ್ನು ಹಾವು ಬಂದು ಕಚ್ಚತೊಡಗಿತು. ಇದರಿಂದ ಭಯಗೊಂಡ ತಾಂಡಾದ ಜನ ಸರಡಿಗಿ ಗ್ರಾಮ ಸೇರಿದರು. ಜಯ್ರಾಮ ದುಃಖಿತನಾಗಿ "ಗೋಪ್ಯಾ ಎನ್ ಮಾಡ್ದಲೆ ಧಗಾ ನೀ ಮಾಡಿದ್ದು ನಾವ್ ಸೋಸ್ ಬೇಕಾಯ್ತಲೆ"[2] ಎಂದು ಕೊರಗಿ ಉಳಿದ ಮಕ್ಕಳಾದ ನಾಮ್ಯಾ, ಖೇಮ್ಯಾ, ರೇವ್ಯಾರೊಂದಿಗೆ ಸರಡಗಿಯಲ್ಲಿ ತಂದೆ ಕಟ್ಟಿಸಿದ ಮನೆಗಳಲ್ಲಿ ಬಂದು ನೆಲೆಸಿದನು.

ಈ ತಾಂಡಾದ ಜನ ಸರಡಿಗೆ ಬಂದು ಸೇರುವುದಕ್ಕೂ ಮೊದಲು ಪ್ರತಿ ಸೋಮವಾರ ಸಂತೆಗೆಂದು ಬಂದು ಹೋಗುತ್ತಿದ್ದರು. ಆಗ ಇವರಿಗೆ ಸರಡಗಿ ಗ್ರಾಮದ ಚಟುವಟಿಕೆಗಳು ಕಣ್ಣಿಗೆ ಕಾಣುತ್ತಿರಲಿಲ್ಲ. ಈಗ ಸರಡಗಿಯಲ್ಲಿ ನೆಲೆಸಿರುವುದರಿಂದ ಅಲ್ಲಿ ನಡೆಯುವ ಕೊಲೆ, ಕಳ್ಳತನ, ಹಾದರ, ಮೋಸ ಮೊದಲಾದವುಗಳನ್ನು ಕಂಡು ಲಮಾಣಿಗರು ತಮ್ಮ ಮೇಲಿರುವ ನಂಬಿಕೆಯನ್ನು ಕಳೆದುಕೊಂಡರು. ಜಯ್ರಾಮನ ಹಿಡಿತ ಸಡಿಲವಾಯಿತು. ಕೆಲಸವಿಲ್ಲದೆ ತಿರುಗಾಡತೊಡಗಿದರು. ಒಂದಕ್ಕೆ ಎಪ್ಪತ್ತೆರಡರಷ್ಟು ನೀಡುವ ಮಟ್ಕಾ ಆಟ ಅವರಿಗೆ ರುಚಿಕರವಾಯಿತು. ಇಸ್ಪೀಟ್ ಆಟ ಹಿಡಿಸಿತು. ಇವರ ಜಮೀನನ್ನು ನುಂಗಿಹಾಕಲು ಮಲ್ಲಪ್ಪ ಎಂಬುವವನು ತನ್ನ ಹೋಟೆಲನಲ್ಲಿ ಬೇಕಾದುದನ್ನು ಪುಗಸಟ್ಟೆ ಕೊಡಲು ತಯಾರಾದ. ಇದೇಲ್ಲವನ್ನು ಅರಿತ ಜಯ್ರಾಮ ಎಲ್ಲರನ್ನು ಉದ್ದೇಶಿಸಿ ನಿಮಗೊಂದು ಮಾತು ಹೇಳಬೇಕು ಎನ್ನುತ್ತಾನೆ.

"ನೋಡ್ ತೋಳ್ಯಾ, ಪೂರ್ಯಾ, ಬೀಕ್ಯಾ ನಮ್ತಾಂಡ ಬಿಟ್ಟು ಬಂದಾನ್ಸುಟಾ ನನ್ಗ ದಿನ್ನ ಒಂದೊಂದು ಕನ್ಸ ಬೀಳಾಕತ್ತಾದ, ಆ ಕನ್ಸಿನಾಗ ದಿನ್ನಾ ನಮ್ ರಮಣಿಬಾಯಿ ಕರ್ದಂಗಾಗ್ತಾದ, ನಮ್ಮನ್ಯಾವ ಹುತ್ತ ಅತ್ತಂಗಾಗ್ತಾದ, ನಮ್ ಹೊಲ್ದಾನ ಬೆಳಿ ಕೂಸಿನಂಗ್ ಒಳ್ದಂಗಾಗ್ತಾದ, ಯಾಕೊ ನನ್ಗ ಇಲ್ಲಿ ಜೀಂವಕ್ ಚೈನಿಲ್ದಂಗಾಗ್ಯಾದ, ಅದ್ಕ ನಾವ್ನಮ್ತಾಂಡಾ ಸೇರೋದಂತ ಲೆಕ್ಕ ಹಾಕೀನಿ"[3] ಎಂದಾಗ ಎಲ್ಲರೂ ತಮ್ಮ ತಮ್ಮ ಮುಖ ನೋಡಿದರು. ತೋಳ್ಯಾ ಧೈರ್ಯಮಾಡಿ ನಾವು ಮತ್ತ ತಾಂಡಾಕ ಹೋಗಬೇಕಾ? ಮತ್ತೆ ನಮ್ಮನ್ನಾ ಹಾವಿಗೆ ಬಲಿ ಕೊಡಬೇಕೆಂದುಕೊಂಡಿರೇನು? ಎಂದು ಪ್ರಶ್ನಿಸುತ್ತಾನೆ. ಜಯ್ರಾಮ ಎಲ್ಲಾ

ಸಮಯ ಒಂದೇ ಆಗಿರಲ್ಲ, ಅದೊಂದು ಕೆಟ್ಟಗಳಿಗೆ ನಮ್ಮ ಗೋಪ್ಯಾ ಅಂಗ ಮಾಡಿದ್ದರಿಂದ ಹಿಂಗಾಯಿತು ಎಂದು ಸಮರ್ಥಿಸಿಕೊಂಡನು. ಹಾಗೂ ನಮ್ಮ ರಮಣಿಬಾಯಿ ಬಾ ಎಂದು ಕರೆಯುತ್ತಿದ್ದಾಳೆ ಎಂದಾಗ ಬೀಕ್ಯಾ ಸಿಟ್ಟಿಗೆದ್ದು "ಆ ಹಾಂವ್ಬಂದು ಕಚ್ಚಾಗ ನಮ್ಮ ರಮಣಿಬಾಯಿ ಏನು ಮಾಡ್ತಿದ್ಲು. ಆಕಿ ಸತ್ತುಳ್ಳಕಿದ್ರ ಬಂದು ಉಳ್ಸಬೇಕಾಗಿತ್ತು ಬಾಪು"[4] ಎಂದು ಜಯ್ರ್ಯಾಮನ ಸಮರ್ಥನೆಯನ್ನು, ರಮಣಿಬಾಯಿ ಅಸ್ತಿತ್ವವನ್ನು ಪ್ರತಿರೋಧಿಸುತ್ತಾನೆ. ಇಲ್ಲಿ ಬಹುಮುಖ್ಯವಾಗಿ ಕಂಡುಬಂದಿದ್ದು ದೇವರ ಇರುವಿಕೆ, ಕನಸಿನಲ್ಲಿ ಬಂದು ಕರೆಯುವುದು ಅದೊಂದು ಮೂಢನಂಬಿಕೆ ಎನ್ನುವ ವಿಚಾರ ವ್ಯಕ್ತವಾಗುತ್ತದೆ. ಬೀಕ್ಯಾಗೆ ಬೆಂಬಲಿಗನಾಗಿ ತೋಳ್ಯಾ "ಯಾ ರಮಣಿಬಾಯಿ ಬಾಪು ಎಲ್ಲಾ ಸುಳ್ಳಾದಾ ಕಲ್ದೇವ್ರು ಏನ್ಮಾಡಂಗದಾ?"[5] ಎಂದಾಗ ಜಯ್ರ್ಯಾಮ ನಿಗಿನಿಗಿ ಬೆಂಕಿಯಂತಾದ ಇಬ್ಬರ ನಡುವೆ ಮಾತಿನ ಪೈಪೋಟಿಯಾದ ನಂತರ ಎಲ್ಲರೂ ಸುಮ್ಮನಾದರು.

ಪೂರ್ಯಾ ಮೆಲ್ಲಗೆ "ಖರೇ ಬಾಪು ಬೀಕ್ಯಾ ಹೇಳಿದ್ ಮಾತು ಬರೋಬರಿ ಆದಾ. ಆಕಿ ಸತ್ತುಳ್ಳಕ್ಕಿ ಆಗಿದ್ರ ಆ ಹಾಂವಿಗ್ಯ್ ಕಡಿಲಾರ್ದಂಗ ಮಾಡಬೇಕಾಗಿತ್ತು, ನಾವೇಲ್ಲ ಅಕಿನ್ಮಕ್ಕೆ ಅಲ್ಲ"[6] ಎಂದು ಪ್ರತಿ ವರ್ಷ ಜಾತ್ರೆಮಾಡುವ ಪದ್ಧತಿಯನ್ನು ನೆನಪು ಮಾಡಿಕೊಂಡನು. ಆಕ್ರೋಶಗೊಂಡ ಜಯ್ರ್ಯಾಮ ಅದೇ ಬೇರೆ, ಇದೆ ಬೇರೆ ಎರಡು ಒಂದೇ ಮಾಡಬೇಡಿರಿ ಎಂದು ಸಿಡಿಮಿಡಿಗೊಂಡನು. ಅದೇನಾದರು ಆಗಲಿ ನಾವಂತು ಮತ್ತೆ ಆ ಹಾವಿನ ಬಾಯಾಗ ಬಿಳಾಕ ತಯಾರಿಲ್ಲ ಎಂದು ಅಂಜುಬುರುಕ ಪೂರ್ಯಾ ಹೇಳಿದನು. ಹೀಗೆ ಒಬ್ಬೊಬ್ಬರು ಒಂದೊಂದು ಮಾತನಾಡುತ್ತ ತಮ್ಮ ಜೀವ ಉಳಿಸಿಕೊಳ್ಳುವುದಕ್ಕಾಗಿ ಜಯ್ರ್ಯಾಮನ ಮಾತನ್ನು ವಿರೋಧಿಸಿದರು. ಅಷ್ಟೇ ಅಲ್ಲದೆ ಜಯ್ರ್ಯಾಮ ಮಕ್ಕಳ ಮುಖ ನೋಡಿದಾಗ ತಂದೆಗೆ ಎದರು ಮಾತಾನಾಡಲು ಧೈರ್ಯವಿಲ್ಲದೆ ನೆಲಬರೆಯುತ್ತ ಮೌನವಾಗಿ ಅಸಮ್ಮತಿಯನ್ನು ಸೂಚಿಸಿದರು. ಆಗ ಒಂದು ನಿರ್ಧಾರಕ್ಕೆ ಬಂದ ಜಯ್ರ್ಯಾಮ ನಾವೆಲ್ಲರೂ ಇಲ್ಲೇ ಇರೋಣ ಆದರೆ ಪದ್ಧತಿಯೊಂದು ಇದೆ ಅದನ್ನು ಬಿಡಬಾರದು ನಾಳೆ ಬರುವ ಎಳ್ಳಮಾಸಿಗಿ ಜಾತ್ರೆ ಮಾಡೋಣು ನಿಮ್ಮ ಹರಕಿಗಳು ಏನಾದರೂ ಇದ್ದರೆ ತಿರಿಸಲು ತಯಾರಾಗಿ ಎಂದು ಹೇಳಿದನು. ಮಾತಿಗೆ ಮಾತು ಬೆಳೆದು ಕೊನೆಗೆ ಜಾತ್ರೆ ಮಾಡುವ ನಿರ್ಧಾರಕ್ಕೆ ಬಂದಾಗ ತೋಳ್ಯಾ "ನೀವೇನಾನಾ ಮಾಡ್ರಿ ನನ್ಪಾಲಿಗಿ ರಮಣಿಬಾಯಿಲ್ಲಾ ಕಾಮಿಣಿಬಾಯಿಲ್ಲಾ ಎಲ್ಲಾ ಜಂಗ್ಲಿ ಮಕ್ಕ"[7] ಎಂದು ಸಿಟ್ಟಿನಿಂದ ಎದ್ದು

ಹೊರಟನು.

ತಾಂಡಾಬಿಟ್ಟು ಊರು ಸೇರಿದ್ದ ಲಮಾಣಿಗರನ್ನು ಕಂಡು ಮೇಲ್ವರ್ಗದವರು ಊರಿನ ವ್ಯವಸ್ಥೆ ಕೆಡವುದೆಂದು ಲೆಕ್ಕ ಹಾಕಿದರೆ, ಬಡ್ಡಿಯವರಿಗೆ, ಸರಾಯಿ ಅಂಗಡಿಯವರಿಗೆ, ಮಾಂಸದ ಅಂಗಡಿಯವರಿಗೆ, ಮಟ್ಕಾ , ಇಸ್ಪೀಟಾಟದವರಿಗೆ ಇವರಿಂದ ಅನುಕೂಲವಾಯಿತು. ತಂದೆಗೆ ಗೊತ್ತಿಲ್ಲದಂತೆ ಜಯ್ರಾಮನ ಮಕ್ಕಳು ಇವುಗಳಿಗೆ ಬಲಿಯಾಗಿ ಮನೆಯೊಳಗಿರುವ ಸಾಮಾನುಗಳನ್ನು ಮಾರಿ ಮಟ್ಕಾ ಆಡತೊಡಗಿದರು. ಸರಡಗಿಯನ್ನು ಆಳುವುವರು ಕುಲಕರ್ಣಿ ರಾಮ್ರಾಯ ಮತ್ತು ಮಾಲೀಗೌಡ ಭೀಮರಾಯ ಊರಿಗೆ ಸಾಲಕೊಟ್ಟು , ಕಾಳುಕಡಿಗಳನ್ನು ಕೊಟ್ಟು ಊರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡವನು. ರಾಮ್ರಾಯ ತನ್ನ ಆಳುಗಳಿಂದ, ಬಡಿಗೆಯ ಏಟುಗಳಿಂದ ಊರನ್ನು ಹಿಡಿತದಲ್ಲಿಟ್ಟುಕೊಂಡಿದ್ದನು. ವಿಚಿತ್ರ ಸ್ವಭಾವದವರಾದ ಇವರು ಸ್ನೇಹಿತರಾಗುವುದು, ಶತ್ರುಗಳಾಗುವುದು ಯಾವಾಗ ಎಂಬುದೇ ತಿಳಿಯುತ್ತಿರಲಿಲ್ಲ. ಊರಿನ ಜನಗಳಿಗೆ ಜಗಳಗಳನ್ನು ತಂದಿಟ್ಟು ಮೋಜುನೋಡುವವರಾಗಿದ್ದರು.

ರಾಮ್ರಾಯ ಒಂದು ಜೀಪನ್ನು ಇಟ್ಟು ಅದಕ್ಕೆ ಮುಸ್ಲಿಂ ಜನಾಂಗದ ಮುಲ್ಲಾ ಹುಸೇನಿಗೆ ಕೆಲಸಕ್ಕಿಟ್ಟಿದ್ದನು. ತನ್ನ ತಂಗಿ ಸರಳಾ ಗಂಡ ಸತ್ತ ನಂತರ ಮನೆ ಸೇರಿದ್ದರಿಂದ ಹುಸೇನಿ ಇರುವ ಒಂದು ಕಣ್ಣು ಅವಳ ಮೇಲಿಟ್ಟ. ಕುಲಕರ್ಣಿ ಸಂಬಂಧಿಕರ ಮದುವೆಗೆಂದು ಮಂಗಳೂರಿಗೆ ಹೋಗಬೇಕಾಯಿತು ತಂಗಿಯ ಕಾವಲಿಗಾಗಿ ಹುಸೇನಿಯನ್ನು ಬಿಟ್ಟು ಹೋರಟನು. ರಾತ್ರಿ ಸಮಯದಲ್ಲಿ ಸರಳ ಮಲಗಿರುವ ಕೋಣೆಗೆ ಮೆಲ್ಲಗೆ ಬರುವಾಗ ಎಚ್ಚರವಾಗಿ ಸರಳ

“ಯಾರು ನೀನು? ಎಂದಾಗ ಹುಸೇನಿ ಕಳ್ಳದನಿಯಿಂದ

ಯಾಕ್ರಿ ಎವ್ವಾ?

ಯಾಕ್ರಿ ಎವ್ವಾಂದ್ರ?

ನಾ ನಿಂ ಹುಸೇನಿ ಹೀನ್ರಿ ಬಾಯಿ

ಹುಸೇನಿದ್ರ ಇಲ್ಲಿಗ್ಯಾಕ್ ಬಂದಲೆ ಕುರ್ಸಾಲ್ಯಾ?

ನಾ ಯಾರೆದ್ರ ಹೇಳಲ್ರಿ ಸವಕಾಸ್ ಮಾತಾಡ್ರಿ ಬಾಯಿ

ಏನಲೋ ಹೀಂಗಂದ್ರ?

ನಿಮಗೂ ಒಂದ್ ಜೋಡಿ ಇಲ್ಲ, ನನಗೂ ಜೋಡಿ ಇಲ್ಲಾದಕ್ಕಂದ್ರಿ ಎವ್ವಾ

ಎಂದು ಸರಳ ಒಂದರೆ ನಿಮಿಷ ಸುಮ್ಮನಾಗಿ"[8] ಈ ವಿಷಯ ನಮ್ಮಣ್ಣನಿಗೆ ಗೊತ್ತಾದರೆ ನಮ್ಮಿಬ್ಬರನ್ನು ಜೀವಂತವಾಗಿ ಉಳಿಸಲ್ಲ ಎಂದು ತಿರಸ್ಕರಿದಳು. ಆಗ ಹುಸೇನಿ

"ಹಂಗೇನು ಆಗಂಗಿಲ್ರಿ ಬಾಯೇರ್ ಬ್ಯಾಡನಬ್ಯಾಡ್ರಿ

ನಿಮ್ಮಾಕ್ಳಿಬೀಳ್ತೀನಿ ನಮ್ಮಣ್ಣ ಹಾರಾ ಹಕ್ಕಿ ಪುಚ್ಚಾ ಎಣಸವ್ ಹಾನಲೋ ಹುಸೇನಿ ನಾ ಕಡಿಮಿಲ್ರಿ ಎವ್ವಾ. ನೀರಾನ್ ಮೀನಿನ್ ಜಾಡಿ ಎತ್ತವಹೀನ್ರಿ,"[9]

ಎಂದಾಗ ಸರಳಾ ಏನು ತೋರದೆ ಸುಮ್ಮನಿದ್ದಾಗ ಒಪ್ಪಿಕೊಂಡಿರವಳೆಂದು ಹುಸೇನಿ ಅವಳನ್ನು ಕೂಡಿದ. ರಾಮ್ರಾಯ ಬಂದ ನಂತರವು ತಾವು ಮಾಡಿಕೊಂಡ ಒಪ್ಪಂದದಂತೆ ಕದ್ದು ಮುಚ್ಚಿ ಕೂಡಿದರು. ಮೂರು-ನಾಲ್ಕು ತಿಂಗಳಲ್ಲಿ ಹೊಟ್ಟೆ ಬಂದು ಹುಸೇನಿ ಔಷಧ ತಂದು ಕೂಡಿಸಿದರ ಪರಿಣಾಮ ಹೆಚ್ಚು ಕಡಿಮೆಯಾಗಿ ರಕ್ತಕಾರಿ ಸತ್ತಳು. ಹುಸೇನಿಯನ್ನು ವಿಚಾರಿಸಿದಾಗ ತಪ್ಪಿಸಿಕೊಳ್ಳಲು ಜಯ್ರಾಮನ ಮೊಮ್ಮಗನಾದ ಕೇಶ್ಯಾನ ಹೆಸರು ಹೇಳಿದನು. ವಿಚಾರಿಸಿದಾಗ ಹೂವ್ವಾ ತರಲು ಹೋದಾಗ ಎಂದಾಗ ಕುಲಕರ್ಣಿ ಸತ್ಯವನ್ನು ತಿಳಿಯದೆ ಅನ್ಯಾಯವಾಗಿ ಲಂಬಾಣಿಯರ ಹುಡುಗನಾದ ಕೇಶ್ಯಾನನ್ನು ಆಳುಗಳಿಂದ ತಾಂಡಾದ ಮಂದಿಗೆ ಗೊತ್ತಾಗದಂತೆ ಹಿಡಿದುಕೊಂಡು ಬಂದು ಸುಡುವ ಬೆಂಕಿಯಲ್ಲಿ ಜೀವಂತ ಸುಟ್ಟರು. ಸಾಲದ್ದಕ್ಕೆ ಜಯ್ರಾಮನ ಹೊಲವನ್ನು ಕಬಳಸಿಕೊಂಡನು. ಸುದ್ದಿ ತಿಳಿದ ಜಯ್ರಾಮ ಸತ್ತ ಮಗ ಮರಳಿ ಬರುವುದಿಲ್ಲ ಹೊಲನಾದರು ಬಿಡಿಕೊಳ್ಳಬೇಕೆಂದು ಕೈ ಕಾಲು ಹಿಡಿದುಕೊಂಡು ಬೇಡಿಕೊಂಡರು ಏನು ಪ್ರಯೋಜನವಾಗದಿದ್ದಾಗ ಕೋರ್ಟ್ ಮೋರೆ ಹೋದರು ಜಯ ಸಿಗಲಿಲ್ಲ. ತಂಗಿಯ ಸಾವಿನ ಚಿಂತೆಯಲ್ಲಿ ವೀಪರಿತ ಕುಡಿತ ಕಲಿತ ಕುಲಕರ್ಣಿ ತಾನು ಭೋಗಿಸಲು ಲಮಾಣೆರ ಹೆಣ್ಣುಗಳನ್ನು ಆಯ್ಕೆ ಮಾಡಿದ.

ಚೂಣ್ಣ್ಯಾ ಎಂಬುವನು ಮಾಲೀಗೌಡನಲ್ಲಿ ಕೆಲಸ ಮಾಡುವವನು. ಇವನ ಹೆಂಡತಿ ಸೋನಿ ಮೇಲೆ ಕುಲಕರ್ಣಿ ಕಣ್ಣಿಟ್ಟದ್ದರಿಂದ ತನ್ನ

ಹೆಂಡತಿಯನ್ನು ಉಳಿಸಿಕೊಳ್ಳಲು ಮಾಲೀಗೌಡನಿಗೆ ತಿಳಸಿದ. ಕುಲಕರ್ಣಿಗಿಂತ ಮೊದಲೇ ಸೋನಿಯ ಮೇಲೆ ಕಣ್ಣಾಕ್ಕಿದ್ದ ಮಾಲೀಗೌಡ ಸಮಯ ಒದಗಿಬಂತು ಎಂದು ಮನಸಲ್ಲಿ ಅಂದುಕೊಂಡು

"ಹಿಂಗ್ಮಾಡೊ ಚೂಣ್ಯಾ

ಹ್ಯಾಂಗ್ರಿ ಎಪ್ಪಾ?

ನಮ್ ಕುದ್ರಿ ಕಟ್ಟಾ ಕೋಟ್ಗಿ ಆದಲ್ಲಾ

ಹು ರೀ ಎಪ್ಪಾ?

ನೀನು ನಿನ್ಹೆಣ್ತಿ ಆ ಕೊಟ್ಯಾಗಿರ್ರಿ ಕುದ್ರಿ ಎತ್ತಿನ ಕೊಟ್ಯಾಗಗ್ ಕಟ್ಟಿದ್ರೈತು ನೀವಿಲ್ಲಿ ಬಂದಿದ್ರ ಕುಲಕರ್ಣಿ ನಿಮ್ಸನೇಕ್ ಬರಂಗಿಲ್ಲ. ಎನಂದಿ?"[10] ಎಂದಾಗ ಒಪ್ಪಿಕೊಂಡ ಚೂಣ್ಯಾ ಹೆಂಡತಿಯೊಂದಿಗೆ ವಾಸಮಾಡತೊಡಗಿದ. ಮಾಲೀಗೌಡ ಚೂಣ್ಯಾನನ್ನು ಸೋನಿಯನ್ನು ಸೇರುವ ಚಪಲದಿಂದ ದೂರದ ಊರಿಗೆ ಕೆಲಸದ ಮೇಲೆ ಕಳಿಸಿದ. ತನ್ನ ಸೇರಬೇಕಾದ ಸೋನಿ ಮಾಲೀಗೌಡನ ಪಾಲಾಗಿದ್ದು ಅರಗಿಸಿಕೊಳ್ಳಲು ಕುಲಕರ್ಣಿಗೆ ಆಗಲಿಲ್ಲ. ತನ್ನ ಆಳುಗಳಿಂದ ಕೊಲ್ಲಲು ತಯಾರಾದ. ಎರಡು ಕಡೆಯಿಂದ ಹೊಡೆದಾಟವಾಗಿ ಮಾಲೀಗೌಡರ ಆಳುಗಳಿಗೆ ತಲೆಗೆ ಪೆಟ್ಟಾಗಿ ಇಬ್ಬರು ಸತ್ತರು. ವಿಚಾರಣೆ ಕೋರ್ಟಿಗೆ ಹೋಗಿದ್ದರಿಂದ ಮಾಲೀಗೌಡ ಚೂಣ್ಯಾನೊಂದಿಗೆ ಕಲಬುರ್ಗಿಗೆ ಹೋಗಿ ಬರುತ್ತಿದ್ದ. ಚೂಣ್ಯಾನಿಗೆ ಗೌಡ ಮತ್ತು ಹೆಂಡತಿಯ ಮೇಲೆ ಸಂಶಯ ಬಂದು, ಒಂದು ದಿನ ರಾತ್ರಿ ತೋಟ ಕಾಯಲು ಹೋಗುವೆನೆಂದು ಹೇಳಿ ಎತ್ತಿನ ಕೊಟ್ಟಿಗೆಯಲ್ಲಿ ಅಡಗಿಕೊಳ್ಳುತ್ತಾನೆ. ತನ್ನ ಅಟ್ಟದಿಂದ ಮೆಲ್ಲನೆ ಇಳಿದುಬಂದು ಸೋನಿಯನ್ನು ಕೂಡಿದ. ಇದನ್ನು ಕಂಡ ಚೂಣ್ಯಾ ಹಾವಿನಂತೆ ಬೂಸುಗುಟ್ಟಿದನಾದರು "ಅಡಕೊಳ್ಳಲಿಕ್ಕೆ ಬಂದವನಿಗೆ ಹಿಡಕೊಂಡಂಗಾಯಿತೆಂಬ" (ಪು. ೮೩) ಮಾತು ನೆನಪಿಗೆ ಬಂದು ಸಮಯ ಬಂದಾಗ ಗೌಡನನ್ನು ಉಳಿಸಬಾರದೆಂದು ತೀರ್ಮಾನಿಸಿದ. ಒಂದು ದಿನ ಕಲಬುರ್ಗಿಯಿಂದ ಬರುವಾಗ ರಾತ್ರಿಯಾಗಿತ್ತು. ಮಾಲೀಗೌಡನು ನೀರು ಕುಡಿಯಲೆಂದು ಊರ ಸಮೀಪವಿರುವ ಹಳ್ಳದಲ್ಲಿ ಬಗ್ಗಿರುವಾಗ ಚೂಣ್ಯಾ ಸುತ್ತಮುತ್ತ ನೋಡಿ ತಲೆಗೆ ಒಂದೇ ಏಟಿನಲ್ಲಿ ಹೊಡೆದು ಸಾಯಿಸಿ ಊರ ಮಂದಿಗೆಲ್ಲ ಕುಲಕರ್ಣಿ ಕಡೆಯವರು ಗೌಡನನ್ನು ಕೊಂದರೆಂದು ಸುದ್ದಿ ಹರಡಿಸಿದ. ಪೋಲಿಸರು ಬಂದು ವಿಚಾರಣೆ ನಡೆಸಿ

ಚೂಣ್ಯಾನನ್ನುಅನುಮಾನಸ್ಪದವಾಗಿ ಕೋರ್ಟಗೆ ಹಾಜರು ಪಡಿಸಲಾಯಿತು. ಕುಲಕರ್ಣಿಯ ಪರವಿರುವ ಸಂಬಂಧಿಯಾದ ವಕೀಲರು ಚೂಣ್ಯಾನನ್ನು ವಿಚಾರಿಸಿದರು. ಚೂಣ್ಯಾ ನೀಡಿದ ಹೇಳಿಕೆಯ ಪ್ರಕಾರ ಹೊಡೆದವರು ಕಳ್ಳರಿರಬೇಕೆಂದು ಕೋರ್ಟ ತಿರ್ಮಾನಿಸಿತು.

"ಕುತ್ತದಲ್ಲಿ ಕುದ್ದವರ ಕಥೆಗಳು" ಚೆನ್ನಣ್ಣ ವಾಲೀಕಾರರ ಮತ್ತೊಂದು ಕಥಾ ಸಂಕಲನ. ಶುಂಭ ನಿಶುಂಭರು ಮತ್ತು ಜಕ್ಕವ್ವ ಕಥೆಯು ಇದರೊಳಗೊಂದು. ಜಕ್ಕವ್ವನ ಬಾಳಿನಲ್ಲಿ ಎದುರಾದ ಸಮಸ್ಯೆಗಳನ್ನು ತೆರೆದಿಡುವುದರ ಜೊತೆಗೆ ಒಂಟಿ ಹೆಣ್ಣು ಹೇಗೆ ಬದುಕಬೇಕೆಂಬುದನ್ನು ತೋರಿಸುತ್ತದೆ. ಈ ಕಥೆಯ ಕೇಂದ್ರಪಾತ್ರ ಜಕ್ಕವ್ವ. ನಿರೂಪಕ, ಕುಲಕರ್ಣಿ, ಜಕ್ಕವ್ವನ ತಮ್ಮ ಶಾಣ, ಶುಂಭ, ನಿಶುಂಭರೆಂದು ಹೆಸರಾದ ಸಿದ್ದಪ್ಪ, ಇವನ ಮಗ ಶೇಖರಪ್ಪ. ಈ ಪಾತ್ರಗಳು ಸ್ವಾಭಿಮಾನ, ಅನುಕಂಪ, ಕಾಮ, ಶೋಷಿತ ವರ್ಗದ ಭೂಮಿಕಸಿಯುವಿಕೆ, ಪಡೆದುಕೊಳ್ಳುವಿಕೆ, ಪ್ರತಿರೋಧ, ಕೊಲೆಗಳ ಮೂಲಕ ಈ ಕಥೆಗೆ ಪೂರ್ಣವಿರಾಮ ಸಿಗುತ್ತದೆ. ಜಕ್ಕವ್ವ ಕಥೆಗಾರರ ಊರಿನವಳು ಪಕ್ಕದೂರಿಗೆ ಮದುವೆ ಮಾಡಿಕೊಟ್ಟರು ಗಂಡನ ಮನೆಯಿಂದ ಸುಖವೆಂಬುದು ಇಲ್ಲದಾಗ ತವರುಮನೆ ಸೇರಬೇಕಾಯಿತು. ಆ ಊರಿನ ಕುಲಕರ್ಣಿಯು ಜಕ್ಕವ್ವನ ಮೇಲಿನ ಮೋಹದಿಂದ ಗಂಡನನ್ನು ಕೊಲೆ ಮಾಡಿಸಿದ್ದನು. ಕುಲಕರ್ಣಿಯು ಎಷ್ಟೇ ಪ್ರಯತ್ನಿಸಿದರು ಜಕ್ಕವ್ವ ಅಂಜದೆ, ಅವನ ಕೈಗೂ ಸಿಗದೆ ತನ್ನ ತವರುಮನೆ ಸೇರಿ ಸ್ವಾಭಿಮಾನದಿಂದ ಬದುಕುತ್ತಿದ್ದಳು. ತಂದೆ ತಾಯಿಯನ್ನು ಕಳಕೊಂಡ ಜಕ್ಕವ್ವ ಇರುವ ತಮ್ಮನೊಂದಿಗೆ ಜೀವನ ಸಾಗಿಸುತ್ತಿದ್ದಳು. ತಮ್ಮನಿಗೊಂದು ಮದುವೆಮಾಡಿ ಹೊಲದ ಕೆಲಸಗಳೆಲ್ಲ ತಾನೆ ಮಾಡುತ್ತ ಗಂಡಸಿನಂತೆ ಬದುಕುತ್ತಿದ್ದಳು. ತಮ್ಮನಿಗೆ ಒಂದು ಮಗುವಾಗಿ ಅದಕ್ಕೆ ತನ್ನ ತಂದೆಯ ಹೆಸರಿಟ್ಟು ಸಂತೋಷದಿಂದ ಇರುವಾಗ ತಮ್ಮನು ಕಲಿಯಬಾರದ ಚಟಗಳನ್ನು ಕಲಿತು ಸಾಲ ಮಾಡಿಕೊಂಡನು. ಸಾಲದ್ದಕ್ಕೆ ಶುಂಭ ನಿಶುಂಭರೆಂದು ಹೆಸರಾದ ಸಾವುಕಾರ ಸಿದ್ದಪ್ಪ ಮತ್ತು ಅವನ ಮಗ ಶೇಖರಪ್ಪನಲ್ಲಿ ಶಾಣನು ಸಾಲ ತೀರಿಸಲು ಇರುವ ಒಂದು ಹೊಲವನ್ನು ಕರಾರಿನ ಮೇಲೆ ಗುತ್ತಿಗೆ ಹಾಕಿ, ಇಪ್ಪತ್ತು ಸಾವಿರ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡು ಬಂದನು. ವಿಷಯ ತಿಳಿದ ಜಕ್ಕವ್ವ ಮನೆಯಲ್ಲಿ ರೇಗಾಡಿದಳು. ತಮ್ಮನ ಮೇಲಿನ ಪ್ರೀತಿಯಿಂದ ಸುಮ್ಮನಾದಳು. ತಮ್ಮನ ಹೆಂಡತಿಯೊಂದಿಗೆ ಕೂಲಿ ಮಾಡುತ್ತ ಜೀವನ ತಳ್ಳುತ್ತಿರುವಾಗ ಬಡವರನ್ನು ಮುನ್ನಲೇಗೆ ತರುವುದಕ್ಕಾಗಿ,

ಆರ್ಥಿಕವಾಗಿ ಸದೃಡರಾಗಲು, ಸಮಾಜದಲ್ಲಿ ಗೌರವದಿಂದ ಬಾಳುವ ಉದ್ದೇಶದಿಂದ ಸರಕಾರ “ಸಾಲದಲ್ಲಿ ಸಾವ್ಕಾರರಿಗೆ ಹೊಲಗಳನ್ನು ಹಾಕಿದ ಬಡವರು ಅರ್ಜಿ ಕೊಡಬೇಕು. ಬಿಡಿಸಿಕೊಡುವೆವು ಎಂದು ತಹಶೀಲದಾರರು ಬಂದು ಹೇಳಿದರು”.[11] ಈ ಮಾತನ್ನು ಕೇಳಿದ ಶಾಣ ತಹಶೀಲ್ದಾರರಿಗೆ ಅರ್ಜಿ ಕೊಟ್ಟರೆ ಹೊಲ ಮತ್ತೆ ತನ್ನದಾಗುವುದೆಂದು ಪೋಲಿಸರ ಮೂಲಕ ಹೊಲವನ್ನು ಪಡೆದುಕೊಂಡನು.

ಇದರಿಂದ ಆ ಇಡೀ ಊರನ್ನೆ ಆಳುತ್ತಿದ್ದ ಸಿದ್ದಪ್ಪ ಮತ್ತು ಶೇಖರಪ್ಪರಿಗೆ ಹೊಟ್ಟೆಯಲ್ಲಿ ಬೆಂಕಿಬಿದ್ದಿತು. ಹಿಂದೆ ಕೆಲವರನ್ನು ತಮ್ಮ ದರ್ಪದಿಂದ ಕೊಲ್ಲಿಸಿದ ಹಾಗೆ ಶಾಣನನ್ನು ಕೊಲ್ಲಬೇಕೆಂದು ಯೋಚಿಸಿ, ರಾತ್ರಿಸಮಯ ಹೊಲದಲ್ಲಿ ರಾಶಿಮಾಡುವಾಗ ಜೀವಂತವಾಗಿ ಸುಟ್ಟುಹಾಕಿದರು. ಕಣ್ಣಾರೆ ಕಂಡ ಜಕ್ಕವ್ವ ಎದಿಹೊಡೆದುಕೊಂಡು ರೋಧಿಸಿದಳು. ಪೋಲಿಸರು ಬಂದು ವಿಚಾರಿಸಿ ಸರಿಯಾದ ಸಾಕ್ಷಿ ಸಿಗದಿದ್ದಾಗ ಸಿದ್ದಪ್ಪ ಮತ್ತು ಶೇಕರಪ್ಪ ಮತ್ತು ಆತನ ಆಳುಗಳು ಜೈಲಿನಿಂದ ಪಾರಾದರು. ತನ್ನ ತಮ್ಮನ ಜೀವ ತಿಂದ ಆ ರಾಕ್ಷಸರನ್ನು ನಿರ್ನಾಮ ಮಾಡಿದಾಗಲೇ ಈ ಊರಿಗೆ ನೆಮ್ಮದಿ ಎಂದು ಹಲ್ಲು ಕಡಿಯತೊಡಗಿದಳು. ಒಂದು ದಿನ ಎಳ್ಳಮಾಸಿಯ ಹಬ್ಬದ ದಿನದಂದು ಸರಗ ಚೆಲ್ಲಲು ತಂದೆ ಮಗ ಇಬ್ಬರೂ ಹೋದ ಸುದ್ದಿ ತಿಳಿದು ಜಕ್ಕವ್ವ ಚೀಲದಲ್ಲಿ ಕೂಡುಗೋಲು ಇಟ್ಟುಕೊಂಡು ಅವರನ್ನು ಹಿಂಬಾಲಿಸಿದಳು. ಸಿದ್ದಪ್ಪನ ಹೊಲದ ಸಮೀಪ ಒಂದು ಜೋಳದ ಹೊಲದಲ್ಲಿ ಅಡಗಿ ಕುಳಿತಳು. ಸಿದ್ದಪ್ಪ ಹೊಲದಿಂದ ಬರುವಾಗ ಸಪ್ಪಳಾಗದಂತೆ ಹಿಂದೆಯಿಂದ ಹೋಗಿ ಒಂದೇ ಏಟಿಗೆ ತಲೆಕತ್ತರಿಸುವಂತೆ ಹೊಡೆದಳು. ಆಗ ಅರ್ದ ರುಂಡ ಕತ್ತರಿಸಿತು, ಮತ್ತೆ ಹೊಡೆದು ರುಂಡವನ್ನು ಬೇರ್ಪಡಿಸಿದಳು. ಮಗನಾದ ಶೇಖರಪ್ಪನ ಹೊಲದಕಡೆ ಹೋಗುವಾಗ ದೂರದಲ್ಲಿ ಬರುವುದು ಕಂಡು ಅವನ ತಂದೆಯನ್ನು ಕೊಂದ ರೀತಿಯಲ್ಲೇ ಅವನ ತಲೆಯನ್ನು ಕತ್ತರಿಸಿದಳು. ಊರಲ್ಲಿ ರಾಕ್ಷಸರಂತೆ ಇದ್ದ ಶುಂಭ ನಿಶುಂಭರನ್ನು ಕೊಂದು ಚಾಮುಂಡಿಯಾದ ಜಕ್ಕವ್ವನನ್ನು ಊರಿನ ಜನ ದೇವತೆಯೆಂದು ಕೊಂಡಾಡಿದರು.

ಒಟ್ಟಿನಲ್ಲಿ ಚೆನ್ನಣ್ಣ ವಾಲೀಕಾರರ ಕಥೆಗಳನ್ನು ಓದಿದಾಗ ಕಥೆಗಳಲ್ಲಿ ಗ್ರಾಮೀಣ ಬದುಕು ತೆರೆದುಕೊಳ್ಳುತ್ತದೆ. ಅಲ್ಲಿ ನಡೆಯುವ ಕ್ರೌರ್ಯ, ಮೋಸ, ದಬ್ಬಾಳಿಕೆ, ಸಾಮಾಜಿಕ ಅಸಮಾನತೆ, ಕುತಂತ್ರ, ಕೊಲೆ ಸುಲಿಗೆ, ಆರ್ಥಿಕ

ಬಲಹೀನತೆ, ಜಾತಿ ತಾರತಮ್ಯ, ವ್ಯವಸ್ಥೆಯ ವಿರುದ್ಧ ಪ್ರತಿರೋಧ ಮೊದಲಾದವು ಕಾಣುತ್ತೇವೆ. ನಾನು ಆಯ್ಕೆ ಮಾಡಿಕೊಂಡ ಈ ಕಥೆಗಳಲ್ಲಿ ಒಂದು ಸಮುದಾಯದವರು ತಮ್ಮ ನೆಲೆಯನ್ನು ಕಳೆದುಕೊಂಡು ನೆಲೆಗಾಗಿ ಬದುಕುವ ಮತ್ತು ಶೋಷಣೆ ಮಾಡುವ ಮೇಲ್ವರ್ಗದವರ ವಿರುದ್ಧ ಬಂಡಾಯವೆದ್ದು, ಸ್ವಾಭಿಮಾನದಿಂದ ಬದುಕುವ ಒಂದು ಹೆಣ್ಣು ಕಾಮುಕ ಗಂಡಸರನ್ನು ಮತ್ತು ರಾಕ್ಷಸರಂತೆ ವರ್ತಿಸುವ, ಶೋಷಣೆ ಮಾಡುವ ಸಮಾಜದ ಮೇಲ್ವರ್ಗದ ವಿರುದ್ದ ಎದುರುಗೊಂಡು ಸದೆಬಡಿದ ರೀತಿ ಇಲ್ಲಿ ಕಾಣಬಹುದು.

## ಕೊನೆಯ ಟಿಪ್ಪಣಿಗಳು:

1. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೩೨
2. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೩೭
3. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೩೯
4. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೬೦
5. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೬೦
6. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೬೧
7. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೬೨
8. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೭೦
9. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೭೦
10. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೭೮

11. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ. ಪು. ಸಂ. ೧೨೬

## ಆಕರಗ್ರಂಥಗಳು:

1. ಚೆನ್ನಣ್ಣ ವಾಲೀಕಾರ. (2003). ಸಮಗ್ರ ಕಥಾ ಸಂಪುಟ. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ. ಗುಲಬರ್ಗಾ.

## ಪರಾಮಾರ್ಶನ ಗ್ರಂಥಗಳು:

1. ಶಿವಗಂಗಾ ರುಮ್ಮಾ. (2016). ತಳಕ್ಕೆ ನೀರೆರೆದರೆ. ಸಿದ್ಧಲಿಂಗೇಶ್ವರ ಪ್ರಕಾಶನ. ಗುಲಬರ್ಗಾ.
2. ರಾಮಚಂದ್ರ ಗಣಾಪೂರ. (2022). ದಲಿತ ಬಂಡಾಯ ಸಾಹಿತ್ಯ. ಸಿದ್ಧಲಿಂಗೇಶ್ವರ ಪ್ರಕಾಶನ. ಗುಲಬರ್ಗಾ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.